ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆಃ ಕಾಶಿಇ/ಶೈವಿ/237/SWF/TWF/2019-20 ದಿನಾಂಕ: 23.12.2021

# ಸುತ್ತೋಲೆ

**ವಿಷಯ:** 2020-21 ಮತ್ತು 2021-22ನೇ ಸಾಲಿನ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ (KSTBF) ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ (KSSWF) ಶುಲ್ಕದ ಮೊತ್ತವನ್ನು ಪಾವತಿಸುವ ಬಗ್ಗೆ.

**ಉಲ್ಲೇಖ:** ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ / ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಬೆಂಗಳೂರು, ರವರ ಸುತ್ತೋಲೆ ಸಂಖ್ಯೆ: ಶಿ.ಕ.ನಿ/ಆಡಳಿತ/ಶಿಕ್ಷಕರ ದಿನಾಚರಣೆ/01/2021-22 ದಿನಾಂಕ:15.09.2021.

* * * * * *

2020-21 ಮತ್ತು 2021-22ನೇ ಸಾಲಿನಲ್ಲಿ ಕೋವಿಡ್-19ರ ಕಾರಣದಿಂದಾಗಿ ಶಿಕ್ಷಕರ ದಿನಾಚರಣೆಯ ಬಾವುಟವನ್ನು ಮುದ್ರಿಸಿ ಕಾಲೇಜುಗಳಿಗೆ ವಿತರಿಸಿರುವುದಿಲ್ಲ. ಆದರೆ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯಾಗಿದ್ದು, ವಿದ್ಯಾರ್ಥಿಗಳಿಂದ ಶಾಲಾ ಶುಲ್ಕದೊಂದಿಗೆ ಸಂಗ್ರಹಿಸಲಾದ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ (KSTBF) ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ (KSSWF) ಶುಲ್ಕವನ್ನು ನಿಧಿಗಳ ಕಛೇರಿಗೆ ಕಡ್ಡಾಯವಾಗಿ ಪಾವತಿಸಿ ನಿಧಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ಕೋರಿರುತ್ತಾರೆ.

ಸದರಿ ಶುಲ್ಕವನ್ನು ಎಲ್ಲಾ ವರ್ಗದ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಂದ ವಿನಾಯಿತಿಯಿಲ್ಲದೆ ಸಂಗ್ರಹಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ಕೆಲವು ಕಾಲೇಜುಗಳು ಇದುವರೆವಿಗೂ ನಿಧಿ ಕಛೇರಿಯಿಂದ ಸಂಸ್ಥೆಯ ಕೋಡ್ ಸಂಖ್ಯೆಯನ್ನು ಪಡೆದುಕೊಂಡಿರುವುದಿಲ್ಲ. ಅಂತಹ ಕಾಲೇಜುಗಳ ಪ್ರಾಂಶುಪಾಲರುಗಳು, ಉಪನ್ಯಾಸಕರು / ವಿದ್ಯಾರ್ಥಿಗಳ ಸಂಖ್ಯೆಯೊಂದಿಗೆ ಕೂಡಲೇ ನಿಧಿಗಳ ಕಾರ್ಯದರ್ಶಿ / ಖಜಾಂಚಿಗಳಿಗೆ ಪತ್ರ ಬರೆದು ಹೊಸ ಕೋಡ್ ಪಡೆದುಕೊಳ್ಳಲು ಕ್ರಮವಹಿಸುವುದು ಹಾಗೂ ಈವರೆವಿಗೂ ಸಂಗ್ರಹಿಸಿರುವ (KSSWF) & (KSTBF) ಶುಲ್ಕ ಮೊತ್ತವನ್ನು ನಿಧಿ ಕಛೇರಿಗೆ ಪಾವತಿಸುವಂತೆ ತಿಳಿಸಿದೆ.

ಕೆಲವು ಕಾಲೇಜುಗಳು ವಿದ್ಯಾರ್ಥಿಗಳಿಂದ ಸಂಗ್ರಹಿಸಿರುವ (KSSWF) & (KSTBF) ಶುಲ್ಕದ ಮೊತ್ತವನ್ನು ಸಕಾಲದಲ್ಲಿ ನಿಧಿಗಳ ಕಛೇರಿಗೆ ಜಮಾ ಮಾಡದಿರುವುದು, ಕೆಲವು ಶೈಕ್ಷಣಿಕ ವರ್ಷಗಳ ಶುಲ್ಕ ಮೊತ್ತವನ್ನು ಮಾತ್ರ ಭಾಗಶ: ಜಮಾ ಮಾಡುವುದು ಹಾಗೂ ಕೆಲವು ಶೈಕ್ಷಣಿಕ ವರ್ಷಗಳ ವಂತಿಗೆಯನ್ನು ಸಂಚಿತ ನಿಧಿ ಖಾತೆಯಲ್ಲಿಟ್ಟುಕೊಂಡಿರುವುದು ಅಥವಾ ವೈಯಕ್ತಿಕ ಖಾತೆಯಲ್ಲಿಟ್ಟುಕೊಂಡಿರುವುದು ನಿಧಿಯ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಕೂಡಲೇ ಇಂತಹ ಶುಲ್ಕ ವಸೂಲಾದ ಶುಲ್ಕದ ಮೊತ್ತವನ್ನು ನಿಧಿಗಳ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳುವುದು. ಇಲ್ಲವಾದಲ್ಲಿ ಇದನ್ನು ಸರ್ಕಾರಿ ಹಣದ ತಾತ್ಕಾಲಿಕ ದುರುಪಯೋಗ ಎಂದು ಪರಿಗಣಿಸಿ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

2020-21 ಮತ್ತು 2021-22ನೇ ಸಾಲಿನಲ್ಲಿ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಂದ ಸಂಗ್ರಹಿಸಿದ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ (KSSWF) ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ (KSTBF) ಶುಲ್ಕದ ಮೊತ್ತವನ್ನು ನಿಧಿ ಕಛೇರಿಗೆ ಚಲನ್ ಮೂಲಕ ಪಾವತಿಸಿ, ಬೇ ಬಾಕಿ ದೃಡೀಕರಣ ಪತ್ರ ಪಡೆದುಕೊಳ್ಳುವಂತೆ ತಿಳಿಸಲಾಗಿದೆ.

**ವಿಶೇಷ ಸೂಚನೆ: ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಹಾಗೂ ರಾಷ್ಟ್ರೀಯ ಕಲ್ಯಾಣ ಪ್ರತಿಷ್ಠಾನ ನಿಧಿಗಳ ವತಿಯಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ನೀಡಲಾಗುತಿರುವ ಸವಲತ್ತುಗಳಿಗೆ ಸಂಬಂಧಿಸಿದ ಅರ್ಜಿ / ನಮೂನೆಗಳನ್ನು ಇಲಾಖಾ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ನಿಯಮಾನುಸಾರ ಅರ್ಜಿಗಳನ್ನು ಸಲ್ಲಿಸುವುದರ ಮೂಲಕ ಸವಲತ್ತುಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ.**

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ: – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ

1) ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗಾ.
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4) ಕಛೇರಿ ಪ್ರತಿ.